International Journal of Kannada Research 2016; 2(2): 16-18

International Journal of Kannada Research
www.kannadajournal.com

ISSN: 2454–5813
IJSR 2016; 2(2): 16-18
© 2016 IJKS
www.kannadajournal.com
Received: 05-12-2015
Accepted: 07-01-2016

**Dr. Nagendra Masuti**
Smt.Veeramma Gangasiri
Women's Degree College
Gulbarga - 585102

**Correspondence**
**Dr. Nagendra Masuti**
Smt.Veeramma Gangasiri
Women's Degree College
Gulbarga – 585102.

# ವೈಚಾರಿಕತೆ ಮತ್ತು ಸಾಹಿತ್ಯ

**Dr. Nagendra Masuti**

ಷಡುದರುಶನ ಜ್ಞಾನವಲ್ಲದೆ ಮತ್ತೆ ಇಲ್ಲೆಂಬ
ಜ್ಞಾನಿಗಳೆಲ್ಲರೂ ಚಾಂಡಾಲಿಗಳು
ಬ್ರಹ್ಮಚಾರಿಗಳೆಲ್ಲರೂ ಉದ್ದೇಶಿಗಳು
ಶಿವಯೋಗಿಗಳೆಲ್ಲರೂ ಅಂಧಕರು
ಇಷ್ಟಲಿಂಗಸಂಬಂಧಿಕರೆಲ್ಲರೂ ಅವಿಚಾರಿಗಳು
ಅವರಿವರ ಪರಿಯಲ್ಲ ಗುಹೇಶ್ವರಾ,
ನಿಮ್ಮ ಶರಣರ ಪರಿ ಬೇರೆ

(ಸ.ವ.ಸಂ. 02, ಸಂ: ಡಾ. ಬಿ.ವ್ಹಿ.ಮಲ್ಲಾಪುರ)
ಪ್ರಭುದೇವರ ಈ ವಚನದ ಸಾಲುಗಳು ಬಿಚ್ಚುತ್ತಾ ಹೋದರೆ ಹಲವು ಅರ್ಥಗಳ ಸಾಗರ ನಿರ್ಮಿತಿಯಾಗುತ್ತದೆ. ಅಷ್ಟು ಸಾಂದ್ರತೆಯ ಹಾಗೂ ಪ್ರಖರವಾದ ವೈಚಾರಿಕತೆಯ ನೆಲೆಗಟ್ಟಿನ ಮೇಲೆ ಈ ವಚನ ನಿಂತಿದೆ. ಒಂದು ಆಲೋಚನೆ ಗಟ್ಟಿಗೊಳ್ಳುವುದು ವೈಚಾರಿಕತೆಯ ಕಾರಣಕ್ಕಾಗಿ. ವಿಷಯ ತತ್ವವಾಗಿ, ತತ್ವ ಸಿದ್ಧಾಂತವಾಗಿ ರೂಪುಗೊಳ್ಳುವ ಸಂದರ್ಭದಲ್ಲಿ ಇಂತಹ ವಚನಗಳು ಸಿಡಿಯುತ್ತವೆ. ಶರಣರ ಇರುವಿಕೆಯ ಪರಿಯೊಂದಾದರೆ ಬದುಕಿನ ಸಹಜ ಪ್ರಕ್ರಿಯೆಗಳು ಇನ್ನೊಂದೆಡೆ. ಬದುಕಿಗೆ ಗೊತ್ತು, ಗುರಿಗಳನ್ನು ನಿರ್ಮಿಸಿಕೊಂಡು, ಅದರತ್ತ ಚಲಿಸಿ, ಮುಟ್ಟಿ, ಆ ಗೋಡೆಗಳನ್ನು ಒಡೆದು ಮತ್ತೊಂದು ಬೃಹತ್ ಬ್ರಹ್ಮಾಂಡವನ್ನು ನಿರ್ಮಿಸುವುದು ಪ್ರಭುದೇವನಿಗೇನು ಹೊಸದಲ್ಲ. ಇಂಥ ಅದ್ಭುತ ವೈಚಾರಿಕತೆಯ ಸಾಹಿತ್ಯ ಸೃಷ್ಟಿ ನಡೆದಿರುವುದು ಇದೇ ನೆಲದಲ್ಲಿ.

ವೈಚಾರಿಕತೆಯೆಂದರೆ ವಿಚಾರಯುಕ್ತ, ವಿಚಾರಪರವಾದಂತಹ, ಭಾವಾವೇಶಗಳಿಂದ ಹೊರತಾದ, ವೈಜ್ಞಾನಿಕತೆಗೆ ಹತ್ತಿರವಾದಂತಹ ಚಿಂತನ – ಮಂಥನದ ಫಲಶೃತಿಯೆಂದು ಹೇಳಬಹುದು. ಸಾಹಿತ್ಯ ಸೃಷ್ಟಿಯ ಆರಂಭದಿಂದಲೂ ವೈಚಾರಿಕತೆಯ ಬೀಜಗಳು ಬಿತ್ತಿರುವುದು, ಚಿಗುರಿರುವುದು ನೋಡಬಹುದು. ಮತ್ತೇ ಕೆಲವು ಸಂದರ್ಭದಲ್ಲಿ ಬೆಳೆದು ಹೆಮ್ಮರವಾಗಿರುವುದನ್ನು ಗಮನಿಸಬಹುದು.

ಶಿವಕೋಟ್ಯಾಚಾರ್ಯ ಹಾಗೂ ನಯಸೇನರ ಕಥಾನಕದಲ್ಲಿ, ಪಂಪನು ಜೋಳದವಾಳಿಯಿಂದ ಬಿಡಿಸಿಕೊಳ್ಳುವ ಪರಿಯಲ್ಲಿ, ರನ್ನ – ನಾಗಚಂದ್ರರ ಪ್ರತಿನಾಯಕನ ಸೃಷ್ಟಿಯಲ್ಲಿ ವೈಚಾರಿಕತೆಯು ಚಿಗುರೊಡೆದಿರುವುದನ್ನು ನೋಡಬಹುದು. ನಡುಗನ್ನಡದ ವಚನಸಾಹಿತ್ಯದಲ್ಲಿ ದಾಸಿಮಯ್ಯನಿಂದ ಲಿಂಗತಾರತಮ್ಯದ ಗೆರೆಗಳನ್ನು ಅಳಿಸುವುದರಲ್ಲಿ, ಪ್ರಭುದೇವರಲ್ಲಿಯ ದೇವರು, ದೇಗುಲಗಳ ನಿರಾಕರಣೆಯಲ್ಲಿ, ಅಂಬಿಗರ ಚೌಡಯ್ಯನ ಶರಣಸತಿ, ಹುಸಿಗುರುಗಳ ವಿಡಂಬನೆಯಲ್ಲಿ, ಮಹಾದೇವಿಯಕ್ಕಳ ಕೌಟುಂಬಿಕ ವ್ಯವಸ್ಥೆಯನ್ನು ಧಿಕ್ಕರಿಸುವಲ್ಲಿ, ಬಸವಣ್ಣ ಜನಿವಾರವನ್ನು ತ್ಯಜಿಸುವುದರಲ್ಲೆಲ್ಲಾ ವೈಚಾರಿಕತೆಯು ಬೆಳೆದು ನಿಂತಿರುವುದನ್ನು ನೋಡಬಹುದು. ಆಧುನಿಕ ಕಾಲದ ಕನ್ನಡ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ವೈಚಾರಿಕತೆ ಬೆಳೆದು ಟಿಸಿಲೊಡೆದು ಹಲವು ರೂಪಗಳಲ್ಲಿ ಸ್ವರೂಪ ತಾಳಿರುವುದನ್ನು ನೋಡಬಹುದು.

ಶಿವರಾಮ ಕಾರಂತರ ಪ್ರಗತಿಪರವಾದ, ವೈಚಾರಿಕ ಪ್ರಧಾನವಾದ ಕೆಲವು ಅಭಿಪ್ರಾಯಗಳನ್ನು ಗಮನಿಸಬಹುದು ;

- ನಾನು ದೇವರನ್ನು ನಂಬುವುದಿಲ್ಲ. ಏಕೆಂದರೆ ನಾನು ನೋಡಿಲ್ಲ. ನನಗೆ ಯಾವುದು ಗೊತ್ತಿಲ್ಲವೋ ಅದನ್ನು ನಂಬುವುದಿಲ್ಲ. ಒಳ್ಳೆಯ ಕೆಲಸ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ನಂಬಿ ಬಂದಿದ್ದೇವೆ. ಅದರೆ ಆ ರೀತಿ ಆಗಿಲ್ಲ. ನನಗೆ ಅನುಕೂಲವಾದಾಗ ಮಾತ್ರ ದೇವರನ್ನು ನಂಬುತ್ತೇವೆ

ಎಂಬುದು ಸರಿಯಲ್ಲ.

- ಸಾಹಿತಿಗಳಿಗೆ ಸಮಾಜದಲ್ಲಿ ಬೇರೆ ಪಾತ್ರವೇನೂ ಇಲ್ಲ. ಸಾಹಿತಿ ಲೋಕೊದ್ಧಾರಕ ಎಂಬ ಭಾವನೆ ಏನೂ ಬೇಡ. ಆತನೂ ನಿಮ್ಮ ಹಾಗೆ ಮನುಷ್ಯ ಬದುಕಿನ ಬಗ್ಗೆ ತನ್ನ ಅನುಭವನ್ನು ಮಾತ್ರ ಹೇಳುತ್ತಾನೆ. ಪರಿಹಾರ ಸೂಚಿಸುವುದಿಲ್ಲ. ಮರ ತಾನಾಗಿ ಬೆಳೆಯುತ್ತದೆ. ಆ ರೀತಿ ಮನುಷ್ಯ ಬೆಳೆಯಲಾರ.

(ವಿಕಿಪೀಡಿಯಾ – ಶಿವರಾಮ ಕಾರಂತರ ಚಿಂತನೆಗಳು)

ಈ ಎರಡು ಅಭಿಪ್ರಾಯಗಳು ಒಬ್ಬ ಲೇಖಕನ ಜವಾಬ್ದಾರಿ ಹಾಗೂ ಮಿತಿಯನ್ನು ತಿಳಿಸಿಕೊಡುತ್ತವೆ. ಆ ಮಿತಿಯಲ್ಲೇ ಮಹತ್ತರತೆಯನ್ನು ಸಾಧಿಸಲು ಯತಾರ್ಥತೆ, ಪ್ರಯೋಗಶೀಲತೆ, ವೈಜ್ಞಾನಿಕತೆ, ವೈಚಾರಿಕತೆಯ ಸೋಪಾನಗಳು ಎಂಬುದನ್ನು ತೆರೆದು ತೋರಿಸುತ್ತವೆ. ಹೊಸಗನ್ನಡ ಸಾಹಿತ್ಯದ ವಿವಿಧ ಮಜಲುಗಳನ್ನು ದಾಟಿ, ಪ್ರಸ್ತುತ ಸಂದರ್ಭದಲ್ಲಿ ಜೀವನ – ಜೀವನಶೈಲಿ – ವೈಚಾರಕತೆಯ ಬೆಸುಗೆಯ ರೀತಿಯನ್ನು ಗಮನಿಸುವುದು ಈ ಲೇಖನದ ಮಿತಿ.

ಶಿವರಾಮ ಕಾರಂತರ 'ನಮ್ಮ ಅಳತೆಯನ್ನು ಮೀರಲಾರದ ದೇವರು' ಪ್ರಬಂಧವನ್ನು ಹಾಗೂ ಎ.ಎನ್.ಮೂರ್ತಿರಾವ ಅವರ 'ದೇವರು' ಕೃತಿಯಲ್ಲಿ 'ದೇವರು ಇದ್ದಾನೆಯೇ? ಎಂಬ ಅಂಕಣದ ಕುರಿತಾಗಿ ಕೆಲವು ಸಂಗತಿಗಳನ್ನು ಹಂಚಿಕೊಳ್ಳಬಹುದು.

- ದೇವರು ನಮ್ಮ ಕಲ್ಪನೆಯ ಶಿಸು. ಅದು ನಮ್ಮ ಅನುಭವ ಮತ್ತು ಕಲ್ಪನೆಗಳನ್ನು ಮೀರಿ ನಿಲ್ಲಲು ಸಾಧ್ಯವಿಲ್ಲ – ಇದಕ್ಕೆ ಪೂರಕವಾದ ಸಂಗತಿಗಳಾದ – ದೇವರ ರೂಪ, ಸ್ವರೂಪ, ಬಣ್ಣ, ಗಾತ್ರ, ವೇಷ, ಉಡುಪು ಮುಂತಾದವುಗಳ ವಿವರಗಳನ್ನು ವೈಚಾರಿಕ ಹಿನ್ನೆಲೆಯಲ್ಲಿ ಚರ್ಚಿಸುವ ಕೆಲಸ ಕಾರಂತರು ಮಾಡುತ್ತಾರೆ. ಮನುಷ್ಯ ಸೃಷ್ಟಿಯ ಸಂರಚನೆಯನ್ನು ನೋಡಿಕೊಂಡೇ ದೇವರ ರೂಪ, ಸ್ವರೂಪದ ಚಿಂತನೆ ಮಾಡುತ್ತಾರೆ. ಡಾರ್ವಿನ್ ಸಿದ್ಧಾಂತಕ್ಕೋ, ವೈಜ್ಞಾನಿಕ ಮೂಲ ಸೃಷ್ಟಿಯ ಸಿದ್ಧಾಂತಗಳಿಗೆ ಇಲ್ಲಿ ಯಾವುದೇ ಸ್ಥಾನವಿಲ್ಲ. ನಮಗೆ ಎರಡು ಕಣ್ಣುಗಳಿದ್ದರೆ ದೇವರಿಗೆ ಒಂದು ಹೆಚ್ಚು ಮಾಡಿ ಹೇಳುವುದು. ನಮಗೆ ಎರಡು ಕೈಗಳಿದ್ದರೆ ದೇವರಿಗೆ ನಾಲ್ಕು – ಎಂಟು ಕೈಗಳನ್ನು ನೀಡಿ ವಿರಾಟ ರೂಪ ಸೃಷ್ಟಿಸುವುದು. ದೇವರೆಂಬುದನ್ನು ನೋಡದೆಯಿದ್ದು ತನ್ನ ರೂಪ ರಚನೆಯ ವಿಧಿಯಲ್ಲೇ ದೇವರ ರೂಪವನ್ನು ಹುಡುಕುವ ಪ್ರಯತ್ನ. ನಮಗಿರುವ ರೂಪವೇ ಮತ್ತೊಂದು ರೀತಿಯಲ್ಲಿ ಸೃಷ್ಟಿಸುವ ಕಾರ್ಯ ನಡೆದು ಹೋಗುತ್ತದೆ ವಿನಃ ಕಣ್ಣು ಕೈಗಳಿಲ್ಲದ ದೇವರು ಸೃಷ್ಟಿಯಾಗುವುದಿಲ್ಲ. ನಮ್ಮ ಚರ್ಮದ ಬಣ್ಣ ಬಿಳಿ–ಕಪ್ಪಗಿದ್ದರೆ, ದೇವರ ಬಣ್ಣ ನೀಲಿ, ಕೆಂಪಾಗಿರುತ್ತದೆ. ಇಂತವುಗಳಿಗೆಲ್ಲ ಪುರಾಣಗಳಲ್ಲಿ ವಿಶೇಷ ಪೂರಕ ಕಥೆಗಳನ್ನು ಹೆಣೆದು ಮುಂದೆ ಸಾಗುತ್ತೇವೆ. ದೇವರ ಬಣ್ಣವು ಮೊದಲು ನಮ್ಮ ಹಾಗೆ ಇದ್ದು ವಿಶೇಷ ಸಂದರ್ಭದಲ್ಲಿ ಬಣ್ಣ ಬದಲಾದ ರೀತಿಯನ್ನು ಪುರಾಣದಲ್ಲಿ ನೋಡುತ್ತೇವೆ. ವೇಷ–ಉಡುಪುಗಳು ನಮ್ಮ ನೆಲಕ್ಕಿಂತಲೂ, ಸ್ವರ್ಗ–ವೈಕುಂಟದ ದೇವರುಗಳಲ್ಲಿ ಭಿನ್ನ ಮಾಡಿ ತೋರಿಸುವ ಕಾರ್ಯ ನಮ್ಮದು. ದೇವರುಗಳ ಕೈಯಲ್ಲಿಯ ಆಯುಧ, ಧರಿಸುವ ಆಭರಣಗಳು, ಬಳಸುವ ಪ್ರಯಾಣ ಸಾಧನಗಳೆಲ್ಲ ವಿಶೇಷ ಬಗೆಯವು. ಹೀಗೆ ನಮ್ಮ ಬದುಕಿಗಿಂತ ಭಿನ್ನವಾಗಿ ಸೃಷ್ಟಿಯಾಗುವ ದೇವರುಗಳ ಹಲವು ಬಗೆಯ ಅಂಶಗಳು ನಮ್ಮ ಕಲ್ಪನೆಯಲ್ಲೇ, ಮಿತಿಯಲ್ಲೇ ನಿರ್ಮಿತಿಯಾಗುತ್ತವೆಂಬುದು ಶಿವರಾಮ ಕಾರಂತರ ಅಭಿಮತ. ಇಲ್ಲಿ ತುಂಬಾ ತಾರ್ಕಿಕ ರೀತಿಯ, ಓದುಗನನ್ನು ತನ್ನ ವಿಚಾರ ಸುರುಳಿಯ ತೆಕ್ಕೆಗೆ ತೆಗೆದುಕೊಂಡು ವಿಷಯ ಮತ್ತು ಮಾಹಿತಿಯನ್ನು ರವಾನಿಸುವ ರೀತಿ ಸೊಬಗಿನಿಂದ ಕೂಡಿದಂತಹದು. ಈ ಶೈಲಿಯು ಶಿವರಾಮ ಕಾರಂತರಿಗೆ ಕರಗತವಾಗಿರುವುದು. ಹಾಗೂ
- ಎ.ಎನ್.ಮೂರ್ತಿರಾವ ಅವರು 'ದೇವರು ಇದ್ದಾನೆಯೇ?' ಎಂದು ಪ್ರಶ್ನಿಸುವುದರ ಮೂಲಕ ಚಿಂತನೆಯನ್ನು ಹರಿಬಿಡುತ್ತಾರೆ. ಸೃಷ್ಟಿಕ್ರಿಯೆಯ ಹಿಂದಿನ ಪರದೆಗಳನ್ನು ಸರಿಸುವ ಪ್ರಯತ್ನವನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ಎ.ಎನ್.ಮೂರ್ತಿರಾವ ಅವರು ನೋಡಲು ಪ್ರಯತ್ನಿಸಿದ್ದಾರೆ. ಪೇಲಿಯವಾದದ ಅಂಕಣದ ಮೂಲಕ ಈ ಲೇಖನ ಆರಂಭಗೊಳ್ಳುತ್ತದೆ. ಕಾಲವೆಂಬುದು ನಿರಂತರ ಪ್ರವಹಿಸುವಂತಹದ್ದು. ಅದಕ್ಕೊಂದು ಸಾಧನವನ್ನು(ಗಡಿಯಾರ) ಮನುಷ್ಯ ಸೃಷ್ಟಿ ಮಾಡುತ್ತಾನೆ. ನನ್ನನ್ನು ಮತ್ತು ನನ್ನನ್ನು ಸೃಷ್ಟಿ ಮಾಡಿದ ಶಕ್ತಿಯ ಸೃಷ್ಟಿಗೆ ಮೂರನೆಯ ಶಕ್ತಿ ಇರಬಹುದು ಎಂಬುದೇ ಇಲ್ಲಿ ಮುಖ್ಯ ಪ್ರಶ್ನೆ. ಈ ಪ್ರಶ್ನೆಯ ಸುತ್ತದ ಹುತ್ತ ಕಟ್ಟುತ್ತ ಹೋಗುತ್ತಾರೆ ಲೇಖಕರು. ರಚನೆ ಎಷ್ಟು ಸತ್ಯವೋ, ಅಷ್ಟೇ ಸತ್ಯ ಸೃಷ್ಟಿಕರ್ತನಿರುವುದು. ಹಾಗಾಗಿ ದೇವರು ಇದ್ದಾನೆಂಬುದು ಪೇಲಿಯವಾದದಲ್ಲಿ. ಈ ವಾದದಿಂದ ಪ್ರಾರಂಭಗೊಂಡ ಲೇಖಕರ ವಿಚಾರಗಳು ಹಲವು ತಿರುವುಗಳಲ್ಲಿ ಹಾದು ಗಮನಸೆಳೆಯುತ್ತವೆ. 'ವಿಶ್ವಯಾವಾಗಲೂ ಇದ್ದೇ ಇತ್ತು' ಅಂಕಣದಲ್ಲಿ – ಪ್ರಕೃತಿಯೆಂಬುದು ಬರಿದಾಗಿತ್ತು. ಪ್ರಕೃತಿಯ ಚಲನೆಯಿಂದ ಪಂಚಭೂತಗಳು ವಿಕಸಿತಗೊಂಡು ವಿವಿಧ ರೂಪ ಪಡೆಯುತ್ತ ಬಂದವು ಎಂಬುದನ್ನು ಹಿಡಿದಿಡುವ ಪ್ರಯತ್ನ ಎ.ಎನ್.ಮೂರ್ತಿರಾವ ಅವರದ್ದು. 'ಪರಿಪೂರ್ಣತೆ'ಯ ಅಂಕಣದಲ್ಲಿ ದೇವರಿಗೊಂದು ಸಾಕ್ಷ್ಯ ಹುಡುಕುವ ಪ್ರಯತ್ನ. ವಿವಿಧ ಧರ್ಮಗಳ ಗ್ರಂಥಗಳಲ್ಲಿ, ನಂಬಿಕೆಗಳಲ್ಲಿ ದೇವರ ಸ್ವರೂಪ, ಅಸ್ತಿತ್ವವನ್ನು ತೆರೆದಿಡುವ ಪ್ರಯತ್ನ ಇಲ್ಲಿ ಕಾಣಬಹುದು. ಈ ಲೇಖನ ಒಂದೆಡೆ ವಿಜ್ಞಾನ, ವಿಜ್ಞಾನದ ತತ್ವದ ಆಧಾರದಿಂದ ಚರ್ಚಿತವಾಗುತ್ತ ಆರಂಭಗೊಂಡರೆ 'ಮಹಾತ್ಮರ ಅನುಭವ ; ಮೇಧಾವಿಗಳ ಅಭಿಮತ'ದಿಂದ ಮುಂದುವರೆಯುತ್ತದೆ. ಗಾಂಧಿ, ಯೇಸು, ರಾಮಕೃಷ್ಣ ಪರಮಹಂಸ, ರಮಣಮಹರ್ಷಿಗಳು ದೇವರ ಬಗೆಗಿಟ್ಟ ದೃಢವಾದ ನಂಬಿಕೆಗಳನ್ನು ಹಾಗೂ ಪೂರಕ ಪಥ್ಯವನ್ನು ಒದಗಿಸುವ ಪ್ರಯತ್ನ ಲೇಖಕರು ಮಾಡಿದ್ದಾರೆ. ಇಂತಹ ಅನ್ವೇಷಣೆಗಳೆಲ್ಲ 'ದೇವರು' ಕೃತಿಯಲ್ಲಿ ಹಲವು ಆಯಾಮಗಳಲ್ಲಿ ಕಾಣಬಹುದು.

ಶಿವರಾಮ ಕಾರಂತರು ಮತ್ತು ಎ.ಎನ್.ಮೂರ್ತಿರಾವ ಅವರು ತಮ್ಮ ಪ್ರಬಂಧಗಳಲ್ಲಿ ಎತ್ತಿರುವ ಪ್ರಶ್ನೆಗಳೆಲ್ಲ ದೇವರು ಹಾಗೂ ಅದರ ಹಿಂದಿರುವ ಸತ್ಯಗಳ ಶೋಧಗಳ ಕುರಿತಾದಂತಹದ್ದು. ತನ್ನನ್ನು ತಾನು ಮತ್ತು ಪ್ರಕೃತಿಯ ಪರಮ ರಹಸ್ಯಗಳನ್ನು ಹುಡುಕುವ ಪ್ರಯತ್ನ ಈ ಬರವಣಿಗೆಯಲ್ಲಿ ಕಾಣುತ್ತೇವೆ. ಕಾಣುವ ಸತ್ಯ ಒಂದೆಡೆಯಾದರೆ, ಕಾಣದಿರುವ ಚರಮಸತ್ಯದ ದರ್ಶಿಸುವ ಹಂಬಲ ಇನ್ನೊಂದೆಡೆಗೆ. ಸಣ್ಣ ಉತ್ಸಾಹವು ವಿಚಾರವಾಗಿ, ಅದು ವೈಜ್ಞಾನಿಕತೆಯ ಹಾಗೂ ಕಾರಣ ಪರಿಣಾಮಗಳ ಹಿನ್ನೆಲೆಯಲ್ಲಿ ಚಿಂತನೆ–ಚರ್ಚೆಗೈಯುತ್ತಾ ಸಾಗಿದಾಗ ವಿಚಾರ ಬೆಳೆದು ನಿಲ್ಲುತ್ತದೆ. ಅದೇ ಒಂದು ವಾದವಾಗಿ ಬೆಳೆಯುತ್ತ ಸಾಗಿ ಸಿದ್ಧಾಂತವಾಗಿ ಪರಿಣಮಿಸುತ್ತದೆ. ಈ ಬಗೆಯ ವ್ಯಾಖ್ಯಾನಗಳಿಗೆ ಪ್ರಖರತೆವುಂಟಾಗಿ, ಅದರ ತಕ್ಕೆಗೆ ಸಹೃದಯಿಗಳು ಬಂದಾಗ ವೈಚಾರಿಕತೆಗೆ ಮೆರಗು ಹೆಚ್ಚಾಗುತ್ತದೆ.

ಬದುಕಿನ ರೀತಿ ಬದಲಾದಂತೆಲ್ಲಾ ಜೀವನ ಪ್ರೀತಿ, ಕಾಳಜಿಗಳ ನೆಲೆಯಲ್ಲಿ ಪಲ್ಲಟವುಂಟಾಗಿ ವ್ಯವಹಾರಿಕತೆಯು

ನೆಲೆಯೂರುತ್ತಿರುವುದನ್ನು ನೋಡಬಹುದು. ಆದರೂ ಇಂತಹ ಸಂದರ್ಭದಲ್ಲಿ ಬದುಕಿನ ಹಸಿತನ, ಮಣ್ಣಿನ ವಾಸನೆಯ ನೆರುಗಂಪಿನ ಸಾಹಿತ್ಯ ಕಳೆದುಕೊಳ್ಳದೆ ಇರುವುದು ವಿಶೇಷ. ಬದುಕಿನ ಶೋಧದ ಇನ್ನೊಂದು ಪರಿಯೇ ವೈಚಾರಿಕತೆ. ಇಲ್ಲಿ ಮಾನವತಾವಾದವನ್ನು, ಪ್ರಕೃತಿವಾದವನ್ನು ಹುಡುಕುವ ಪ್ರಯತ್ನಗಳಿವೆ. ಈ ಅಂಶವನ್ನು ಕನ್ನಡದ ಬಿಗ್ ಬಾಸ್15ರ 3 ನೆಯ ದಿನದಲ್ಲಿ ಒಬ್ಬ ಸದಸ್ಯೆ ಹೇಳಿದ ಅನುಭದ ನುಡಿಯ ಹಿನ್ನೆಲೆಯಲ್ಲಿ ಚರ್ಚಿಸಬಹುದು;

- 'ನಾನು ಪ್ರಾಥಮಿಕ ಶಾಲೆ ಓದುವಾಗ, ಶಾಲೆಗೆ ನಡೆದುಕೊಂಡು ಹೋಗಬೇಕು. ಅದು ತುಂಬಾ ದೂರವಿತ್ತು. ನಾನು ನನ್ನ ತಮ್ಮ ರೈಲಿನ ಒಂದೊಂದು ಹಳಿಯ ಮೇಲೆ ಆಟವಾಡುತ್ತ ಬರುತಿದ್ದೇವು. ಹೀಗೆ ಒಂದು ದಿನ ಶಾಲೆಯಿಂದ ಮರಳಿ ಬರುವಾಗ ಒಬ್ಬ ವಯಸ್ಸಾದ ಬಿಕ್ಷುಕನ ಮೇಲೆ ನನ್ನ ಕಣ್ಣು ಹರಿಯಿತು. ಯಾರೊಬ್ಬರೂ ಆತನ ಜೊತೆಯಲ್ಲಿ ಇರಲಿಲ್ಲ. ಬಿಕ್ಷೆ ಬೇಡಲು ಆಗುತ್ತಿರಲಿಲ್ಲ. ಹಾದು ಹೋಗುವವರು ಸಹ ನಿರ್ಲಕ್ಷಿಸತೊಡಗಿದರು. ಆತನಿಗೆ ಕಾಸು ಸಂಗ್ರಹ ಕಡಿಮೆ ಆಗಿ, ಹೊಟ್ಟೆಗೆ ತಿನ್ನಲೂ ಏನೂ ಇರದೇ ಇರುವುದು ನನ್ನ ಕಣ್ಣಿಗೆ ಬಿತ್ತು. ಒಂದು ದಿನ ಶಾಲೆಯಿಂದ ಬಂದವಳೇ ಪುಸ್ತಕದ ಚೀಲ ಮನೆಯಲ್ಲಿಟ್ಟು ಬಿಕ್ಷುಕ ಅಜ್ಜನಲ್ಲಿ ಹೋಗಿ, ಅವನಿಗಾಗಿ ನಾನು ಬಿಕ್ಷೆ ಬೇಡಲು ಶುರುಮಾಡಿದೆ. ಒಂದು – ಎರಡು ತಾಸು ಹೀಗೆ ಮಾಡಿ ಬಂದ ಹಣ ಸಂಗ್ರಹಿಸಿ, ತಿನ್ನಲು ತಿಂಡಿ ಕೊಡಿಸಿ ಬಂದಾಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ಹೀಗೆ ಅವನು ಸಾಯುವವರೆಗೆ ಕೆಲ ದಿನ ಮಾಡಿದೆ. ಕೊನೆಗೊಂದು ದಿನ ಬಿಕ್ಷುಕ ಸತ್ತಾಗ ನನ್ನ ಹೆಸರು ಹೇಳಿ, ಅವಳೇ ನನ್ನ ಸಂಸ್ಕಾರ ಮಾಡಬೇಕೆಂದು ಹೇಳಿದನಂತೆ. ಅದರಂತೆ ನಾನು ಅವನ ಶವಕ್ಕೆ ಬೆಂಕಿ ಇಟ್ಟಾಗ ಆದ ಆನಂದ ನನ್ನ ಮಗು ಪಡೆದಾಗಲೂ ಇಲ್ಲ'

ಇದು ಕಥೆಯಲ್ಲ, ಜೀವನದ ಒಂದು ಕ್ಷಣವನ್ನು ಅನುಭವಿಸಿದ ರೀತಿಯಷ್ಟೇ. ಈ ನೆಲದ, ಸಂಸ್ಕೃತಿಯ ಛಾಯೆ ಇಲ್ಲಿದೆ. ತನ್ನ ಬದುಕಿನಲ್ಲಿ ನಡೆದ ಭಾವನಾತ್ಮಕ ನಂಟು, ಭಟ್ಟಿಯಿಳಿಸಿದ ವೈಚಾರಿಕತೆಯ ಸಿಂಚನವೂ ಇಲ್ಲಿದೆ. ಸಾಹಿತ್ಯವೆಂಬುದು ಕೇವಲ ಅನುಭವದ ವ್ಯಾಖ್ಯಾನವಲ್ಲ. ಹಲವು ಸಂಗತಿಗಳ ಸಂಯೋಜನಗಳ ಕೇಂದ್ರ. ಬದುಕನ್ನು ವಿಮರ್ಶೆಗೊಳಿಸುವ, ಸಾಹಿತ್ಯದಲ್ಲಿ ಪುನರ್‌ಪರಾಮರ್ಶಿಸುವ ಸಂಗತಿಗಳನ್ನು ನೋಡಬಹುದು. ಕನ್ನಡ ಸಾಹಿತ್ಯದಲ್ಲಿ ಅನೇಕರು ವೈಚಾರಿಕ ಬರಹಗಳನ್ನು ಪುಸ್ತಕ ರೂಪದಲ್ಲಿ, ಪತ್ರಿಕಾ ಮಾಧ್ಯಮದಲ್ಲಿ ಅಂಕಣ ರೂಪದಲ್ಲಿ ಬರೆಯುತ್ತಿದ್ದಾರೆ. ಪ್ರಚಲಿತ ವಿದ್ಯಮಾನದ, ಸಾಮಾಜಿಕ, ರಾಜಕೀಯ, ಧಾರ್ಮಿಕ, ಶೈಕ್ಷಣಿಕ ಸಂಗತಿಗಳಿಗೆ ಹೊಸ ದೃಷ್ಟಿಕೋನ ಮತ್ತು ಆಯಾಮ ನೀಡಲು ಬರವಣಿಗೆ ಹರಿತಗೊಂಡಿರುವುದನ್ನು ಕಾಣಬಹುದು.

ಸಾಹಿತ್ಯದ ಸೃಷ್ಟಿಯು ಆಧುನಿಕ ಸಂವೇದನೆಗಳನ್ನು ಹೀರಿಕೊಂಡು ತನ್ನ ನಿಲುವುಗಳನ್ನು ಸ್ಪಷ್ಟಮಾಡಿಕೊಳ್ಳುವ ಕಾಲ ಈಗ ಸನ್ನಿಹಿತವಾಗಿದೆ. ಅಂತಹ ಕೆಲುವ ಅಂಶಗಳನ್ನು ಈ ಕೆಳಗಿನಂತೆ

**ವಿವರಿಸಬಹುದು**

1. ಹಳೆಯದನ್ನೆಲ್ಲಾ ಮೆಲುಕು ಹಾಕುವ, ವೈಭವೀಕರಿಸುವ, ಯಾವುದ್ಯಾವುದನ್ನೋ ಹೊಗಳುವ ಬರವಣಿಗೆಯಿಂದ ದೂರವಿರುವುದು.
2. ಸಾಹಿತ್ಯದ ಕೆಲವು ಮಡಿವಂತಿಕೆಗಳನ್ನು ಬಿಟ್ಟು ವಸ್ತುನಿಷ್ಟತೆಗೆ, ಅನ್ವಯತೆಗೆ ಸರಿಹೊಂದುವ ಸಂಗತಿಗಳ ವಿವರಣೆಯ ಅವಶ್ಯಕತೆಯಿದೆ.
3. ಆಧುನಿಕ ಬದುಕಿನ ಸಮಸ್ಯೆ – ಗೋಳುಗಳಿಗೆ ಸ್ಪಂದನೆಯಿರಬೇಕಿದೆ. ಅದಕ್ಕೆ ಪರಿಹಾರ ಕೊಡಬೇಕೆಂಬ ನಿಯಮವಿಲ್ಲ. ಒಂದು ಸಾಂತ್ವಾನ ಅಥವಾ ಖಂಡನೆಯಾದರೆ ಸರಿ. ಬದುಕು ತನ್ನ ಮಾರ್ಗ ಹುಡುಕುತ್ತ ಹಾಗೂ ರೂಪುಗೊಳ್ಳುತ್ತ ಸಾಗುತ್ತಿರುತ್ತದೆ.
4. ಬದುಕಿನ ವಿಭಿನ್ನ ಮುಖಗಳ ಅನಾವರಣವಾಗಬೇಕಿದೆ. ಅದ್ದರಿಂದ ವಿವಿಧ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಯುವಕರು ಸಾಹಿತ್ಯ ಕ್ಷೇತ್ರದಲ್ಲಿ ಪ್ರವೇಶ ಪಡೆಯುವುದು ಮುಖ್ಯ.
5. ಸರಳ ಅನುಭವ, ವಿಶೇಷ ದಾಖಲೆಯೊಂದಿಗೆ ಸಾಹಿತ್ಯ ಬೆಳೆದು ಬರಬೇಕಿದೆ. ಆದ್ದರಿಂದ ವೈಚಾರಿಕ, ವೈಜ್ಞಾನಿಕ ಆಲೋಚನೆಗಳ ಜೊತೆಗೆ ಸಮಷ್ಟಿ ಪ್ರಜ್ಞೆಯನ್ನು ವಿಸ್ತೃತಗೊಳಿಸುವ ಸಾಹಿತ್ಯ ಸೃಷ್ಟಿಯಾಗಬೇಕಿದೆ.
6. ಸಾಹಿತ್ಯದಲ್ಲಿಯ ಕರುಣೆ, ಅನುಕಂಪ, ಮೌಢ್ಯಗಳಿಂದ ಹೊರಬಂದು ಶುದ್ಧ ಅಂತಃಕರಣದ ಪ್ರೀತಿಯ ಬುಗ್ಗೆಯೊಡೆಯಬೇಕಿದೆ.
7. ಗದ್ಯ, ಪದ್ಯದ ಮಾದರಿ ಸಾಹಿತ್ಯವನ್ನು ಭೇದಿಸಿ, ಹೊಸ ಸಾಹಿತ್ಯದ ಕಟ್ಟು, ಪ್ರಕಾರಗಳನ್ನು ಹುಟ್ಟುಹಾಕಬೇಕಿದೆ.
8. ನೀತಿ – ಉಪದೇಶ, ತತ್ವ – ಬೋಧೆಯ ಸಾಹಿತ್ಯದಿಂದ ನಾಲ್ಕು ಹೆಜ್ಜೆ ಮುಂದೆ ಹೋಗಿ ನವೀನ ವಿಚಾರ ಕ್ರಾಂತಿಗೆ ಕಾರಣವಾಗುವ ಸಾಹಿತ್ಯವನ್ನು ರಚಿಸಿಕೊಳ್ಳಬೇಕಿದೆ.
9. ಸಾಹಿತ್ಯ ರಂಜನೆ, ಮನೋರಂಜನೆಯಿಂದ ಹೊರಬಂದು ಎಲ್ಲರನ್ನು ಎಚ್ಚರಿಸುವ, ಸೆಟೆದು ನಿಲ್ಲುವ ಮತ್ತೊಂದು ಯುಗಕ್ಕೆ ತಯ್ಯಾರಾಗುವಂತಹ ಕಾರ್ಯ ಮಾಡಲಿ ಎಂಬ ಆಕಾಂಕ್ಷೆ ನನ್ನದು.